ಆ) ಸರ್ಕಾರವು ವಿತ್ತೀಯ ಸುಧಾರಣೆ ಅಧಿನಿಯಮವನ್ನು ಜಾರಿಗೆ ತಂದಿರುತ್ತದೆ. ಅಂದಾಜಿಸಲಾದ ವಿತ್ತೀಯ ಕೊರತೆಯಾದ 5210.57 ಕೋಟಿ ರೂಪಾಯಿಗಳು ಜಿಎಸ್‌ಡಿಪಿಯ ಶೇಕಡ 2.82 ರಷ್ಟಿರುತ್ತದೆ. ಸರ್ಕಾರದ ಸಾಲ ಪಡೆಯುವ ಕಾರ್ಯಕ್ರಮವು ಸಾಲದ ಲಭ್ಯತೆಗಿಂತ ಹೆಚ್ಚಾಗಿ ಸಾಲ ಮರುಪಾವತಿ ಸಾಮರ್ಥ್ಯವನ್ನು ಆಧರಿಸಿದೆ. ತೆರಿಗೆ ಮತ್ತು ತೆರಿಗೆಯೇತರ ಸಂಪನ್ಮೂಲ ಸಂಗ್ರಹಣೆಯಲ್ಲಿ ಗಣನೀಯ ಹೆಚ್ಚಳ ಸಾಧನೆ, ಅಭಿವೃದ್ಧಿಯೇತರ ವೆಚ್ಚದಲ್ಲಿ ಕಡಿತಕ್ಕೆ ಕ್ರಮ, ಎಲ್ಲಾ ವಲಯಗಳಲ್ಲೂ ಸಹಾಯಧನದ ಸೂಕ್ತ ನಿರ್ವಹಣೆಯನ್ನು ಖಚಿತಪಡಿಸುವುದು, ಸಾರ್ವಜನಿಕ ವೆಚ್ಚಗಳ ಉತ್ಪಾದಕತೆಯಲ್ಲಿ ಸುಧಾರಣೆ, ಸಂಪನ್ಮೂಲ ಸಂಗ್ರಹಣೆಯಲ್ಲಿ ಮತ್ತು ವೆಚ್ಚಗಳಲ್ಲಿ ಆದಾಯ ಸೋರಿಕೆ ತಡೆಗಟ್ಟಲು ಮತ್ತು ಭ್ರಷ್ಟಾಚಾರ ಹತ್ತಿಕ್ಕಲು ಅನುವಾಗುವಂತೆ ಆಡಳಿತ ಯಂತ್ರವನ್ನು ಜಾಗೃತಗೊಳಿಸುವುದು – ಈ ಕ್ರಮಗಳಿಂದ ವಿತ್ತೀಯ ಕೊರತೆಯನ್ನು ನಿಯಂತ್ರಿಸಲು ಗುರಿಯನ್ನು ಹೊಂದಿದೆ.

ಇ) – ಇಲ್ಲ –

ಈ) ರಾಜ್ಯ ಸರ್ಕಾರವು 2006–07ನೇ ಆಯವ್ಯಯ ಅಂದಾಜು ಪಟ್ಟಿ ತಯಾರಿಸುವಾಗ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳಿಂದ ಉಂಟಾಗುವ ಆಧಾಯವನ್ನು ಹೆಚ್ಚುವರಿಯಾಗಿ ಗುರುತಿಸಿದ್ದು, ಈಗಿನಂತೆ ಅವುಗಳ ಮೇಲಿರುವ ತೆರಿಗೆಯನ್ನು ಇಳಿಸಿದಲ್ಲಿ ರಾಜ್ಯ ಬೊಕ್ಕಸಕ್ಕೆ ನಷ್ಟ ಉಂಟಾಗುತ್ತದೆ, ಹಾಗೂ ರಾಜ್ಯದ ಅಭಿವೃದ್ಧಿ ಕಾಮಗಾರಿಗಳ / ಯೋಜನೆಗಳ ಮೇಲೆ ಪರಿಣಾಮ ಬೀರಿ ರಾಜ್ಯದ ಅಭಿವೃದ್ಧಿ ಕುಂಠಿತವಾಗುತ್ತದೆ.

ಗ್ರಾಮ ಕರಣಿಕರು

205 (821) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಂದಾಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ಗ್ರಾಮ ಕರಣಿಕರ ಸಂಖ್ಯೆ ಎಷ್ಟು?

ಆ) ಖಾಲಿ ಇರುವ ಗ್ರಾಮಕರಣಿಕರ ಹುದ್ದೆಗಳು ಎಷ್ಟು?

ಇ) ಗ್ರಾಮಕರಣಿಕರ ಕೊರತೆ ಇರುವುದನ್ನು ಸರ್ಕಾರ ಗಮನಿಸಿದೆಯೇ?

ಈ) ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) 8244

ಆ) 525

ಇ) ಹೌದು

ಈ) ತಾಲ್ಲೂಕು	ಮಂಜೂರಾದ ಗ್ರಾಮಕರಣಿಕರ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಗ್ರಾಮಕರಣಿಕರ ಹುದ್ದೆಗಳ ಸಂಖ್ಯೆ
ಮಂಗಳೂರು	93	8
ಬಂಟ್ವಾಳ	55	9
ಪುತ್ತೂರು	59	10
ಬೆಳ್ತಂಗಡಿ	43	7
ಸುಳ್ಯ	35	9
ಒಟ್ಟು	**285**	**43**

ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಗ್ರಾಮಲೆಕ್ಕಿಗರ ನೇರನೇಮಕಾತಿ ಪ್ರಕ್ರಿಯೆಯು ಹಲವು ವರ್ಷಗಳಿಂದ ಸ್ಥಗಿತಗೊಂಡಿದೆ. ಇದರಿಂದ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಬಿದ್ದಿವೆ. ಖಾಲಿ ಇರುವ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದೆ.

ನಾಡಕಛೇರಿಗೆ ವಿಶೇಷ ತಹಶೀಲ್ದಾರ್ ಮತ್ತು ಕಂಪ್ಯೂಟರ್ ಪಹಣಿ ವಿತರಣಾ ವ್ಯವಸ್ಥೆ

206 (820) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ): ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ತಾಲ್ಲೂಕು ಮೂಲ್ಕಿ ನಾಡ ಕಛೇರಿಗೆ ವಿಶೇಷ ತಹಶೀಲ್ದಾರ್ ಹಾಗೂ ಕಂಪ್ಯೂಟರ್ ಪಹಣಿ (ಆರ್.ಟಿ.ಸಿ.) ವಿತರಣಾ ವ್ಯವಸ್ಥೆ ಈತನಕ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಬಂದಿದ್ದಲ್ಲಿ, ಯಾವಾಗ ಒದಗಿಸಲಾಗುವುದು;

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಮಂತ್ರಿಗಳು) :

ಅ) ಹೌದು. ಮುಲ್ಕಿ ನಾಡಕಛೇರಿಗೆ ವಿಶೇಷ ತಹಶೀಲ್ದಾರ್ ಹುದ್ದೆ ಇರುವುದಿಲ್ಲ. ಉಪ ತಹಸೀಲ್ದಾ ಹುದ್ದೆ ಇರುತ್ತದೆ.

ಆ) ಎಲ್ಲಾ ಹೋಬಳಿ ಮಟ್ಟದಲ್ಲಿ ಗಣಕೀಕೃತ ವಿತರಣಾ ವ್ಯವಸ್ಥೆಯನ್ನು ಅಳವಡಿಸಲು ಪರಿಶೀಲನೆಯಲ್ಲಿದೆ.

ಇ) ಮೇಲಿನಂತೆ.

ಖಾಲಿಯಿರುವ ಗ್ರಾಮ ಲೆಕ್ಕಿಗರ ಹಾಗೂ ತಹಶೀಲ್ದಾರ್ ಹುದ್ದೆಗಳು – 219

209 (1065) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಗ್ರಾಮಲೆಕ್ಕಿಗರ ಸಂಖ್ಯೆ ಎಷ್ಟು?